# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ ಬಯಲು ರಂಗಮಂದಿರಗಳ ಬಾಡಿಗೆ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಏಕ ಕಡತ ಸಂಖ್ಯೆ:ಡಿಕೆಸಿ-26011/117/2021.

**ಪ್ರಸ್ತಾವನೆ**:

ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ರವೀಂದ್ರ ಕಲಾಕ್ಷೇತ್ರ ಹಾಗೂ ನಯನ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಈಗಾಗಲೇ ನಿಗದಿಪಡಿಸಿರುವ ಬದಲಿ ಪ್ರತಿ ಪಾಳಿಗೆ ಸಾಹಿತ್ಯಿಕ ಕಾರ್ಯಕ್ರಮಗಳು, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಹವ್ಯಾಸಿ ನಾಟಕ ತಂಡಗಳ ನಾಟಕ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಯಕ್ಷಗಾನ, ಸರ್ಕಾರ ಗುರುತಿಸಿ ಅನುದಾನ ಪಡೆಯುತ್ತಿರು ವ ವೃತ್ತಿ ನಾಟಕ ಕಂಪನಿಗಳು ಟಿಕೆಟ್ ನೀಡಿ ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪರಿಷ್ಕೃತ ಬಾಡಿಗೆಯನ್ನು ನಿಗದಿಪಡಿಸುವ ಸಲುವಾಗಿ ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದ ಬಾಡಿಗೆಯನ್ನು ಹೆಚ್ಚಿಸಿ ನಿಗದಿಪಡಿಸಲು ಪರಿಷ್ಕರಿಸುವ ಬಗ್ಗೆ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 24 ಕಸಧ 2022, ಬೆಂಗಳೂರು ದಿನಾಂಕ: 04-03-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ ಬಯಲು ರಂಗಮಂದಿರಗಳ ಬಾಡಿಗೆಯನ್ನು ಅನುಬಂಧ-01ರಲ್ಲಿರುವಂತೆ ಪರಿಷ್ಕರಿಸಿ ಆದೇಶಿಸಿದೆ.

2. ರವೀಂದ್ರ ಕಲಾಕ್ಷೇತ್ರ ಹಾಗೂ ಕನ್ನಡ ಭವನದ ವಿವಿಧ ರಂಗಮಂದಿರಗಳಿಗೆ ಪ್ರತ್ಯೇಕ ವಿದ್ಯುತ್ ಮೀಟರುಗಳನ್ನು ಅಳವಡಿಸಿದ ನಂತರ ವಿದ್ಯುತ್ ಬಿಲ್ ಅನ್ನು ಠೇವಣಿ ಹಣದಲ್ಲಿ ಕಡಿತ ಮಾಡಿ ಉಳಿದ ಠೇವಣಿ ಹಣವನ್ನು ವಾಪಸ್ಸು ಮಾಡುವಂತೆ ಸೂಚಿಸಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ:31-12-2021ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).

ಇವರಿಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

3. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 24 ಕಸಧ 2022, ದಿನಾಂಕ:4-3-2022 ಕ್ಕೆ**

## ಅನುಬಂಧ – 01

**ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ ಬಯಲು ರಂಗಮಂದಿರಗಳ ನಿಗಧಿ ಪಡಿಸಿರುವ ಪರಿಷ್ಕೃತ ಬಾಡಿಗೆಯ ವಿವರಗಳು:**

| ಕ್ರ.ಸ | ವಿವರ | ಬಾಡಿಗೆ | | ಠೇವಣಿ | ಜಿ.ಎಸ್.ಟಿ18% | ಒಟ್ಟು | ಷರಾ |
|---|---|---|---|---|---|---|---|
| 01 | ರವೀಂದ್ರ ಕಲಾಕ್ಷೇತ್ರ (ನಾಟಕ) | ಮೊದಲನೇ ಪಾಳಿ (9-2) | ರೂ.5,000/- | ರೂ.5,000/- | ರೂ.900/- | ರೂ.10,900/- | ಪ್ರತಿ ವರ್ಷ 5% ಬಾಡಿಗೆಯನ್ನು ಹೆಚ್ಚಿಸಲಾಗುವುದು. |
| | | ಎರಡನೇ ಪಾಳಿ (4-9) | ರೂ.5,000/- | ರೂ.5,000/- | ರೂ.900/- | ರೂ.10,900/- | |
| | ರವೀಂದ್ರ ಕಲಾಕ್ಷೇತ್ರ (ಸಾಂಸ್ಕೃತಿಕ ಕಾರ್ಯಕ್ರಮ) | ಮೊದಲನೇ ಪಾಳಿ (9-2) | ರೂ.6,000/- | ರೂ.5,000/- | ರೂ.1080/- | ರೂ.12,080/- | |
| | | ಎರಡನೇ ಪಾಳಿ (4-9) | ರೂ.6,000/- | ರೂ.5,000/- | ರೂ.1080/- | ರೂ.12,080/- | |
| 02 | ನಯನ ರಂಗಮಂದಿರ | ಮೊದಲನೇ ಪಾಳಿ (9-2) | ರೂ.3,000/- | ರೂ.3,000/- | ರೂ.540/- | ರೂ.6,540/- | --- |
| | | ಎರಡನೇ ಪಾಳಿ (4-9) | ರೂ.3,000/- | ರೂ.3,000/- | ರೂ.540/- | ರೂ.6,540/- | |
| 03 | ಸಂಸ ಬಯಲು ರಂಗಮಂದಿರ | (4-9) ಸಂಜೆ ಮಾತ್ರ | ರೂ.1000/- | ರೂ.1000/- | ರೂ.180/- | ರೂ.2,180/- | --- |
| 04 | ಆರ್ಟ್ ಗ್ಯಾಲರಿ | ಮೊದಲನೇ ಪಾಳಿ (9-2) | ರೂ.500/- | ರೂ.500/- | ರೂ.90/- | ರೂ.1,090/- | --- |
| | | ಎರಡನೇ ಪಾಳಿ (4-9) | ರೂ.500/- | ರೂ.500/- | ರೂ.90/- | ರೂ.1,090/- | |
| 05 | ಮಹಿಳಾ ವಿಶ್ರಾಂತಿ ಕೊಠಡಿ | ಮೊದಲನೇ ಪಾಳಿಗೆ (9-2) | ರೂ. 500/- | ಇಲ್ಲ | ರೂ.90/- | ರೂ.590/- | --- |
| | | ಎರಡನೇ ಪಾಳಿ (4-9) | ರೂ. 500/- | ಇಲ್ಲ | ರೂ.90/- | ರೂ.590/- | |

| | | | | | | | |
|---|---|---|---|---|---|---|---|
| 06 | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ (ನಾಟಕ) | ಮೊದಲನೇ ಪಾಳಿ (9-2) | ರೂ. 3,000/- | ರೂ.3,000/- | ರೂ.540/- | ರೂ.6,540/- | --- |
| | | ಎರಡನೇ ಪಾಳಿ (4-9) | ರೂ. 3,000/- | ರೂ.3,000/- | ರೂ.540/- | ರೂ.6,540/- | |
| | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ (ಸಾಂಸ್ಕೃತಿಕ) | ಮೊದಲನೇ ಪಾಳಿ (9-2) | ರೂ.4,000/- | ರೂ.4,000/- | ರೂ.720/- | ರೂ.8,720/- | --- |
| | | ಎರಡನೇ ಪಾಳಿ (4-9) | ರೂ.4,000/- | ರೂ.4,000/- | ರೂ.720/- | ರೂ.8,720/- | |
| 07 | ಕಲಾಗ್ರಾಮ ಬಯಲು ರಂಗಮಂದಿರ | ಮೊದಲನೇ ಪಾಳಿಗೆ (9-2) | ರೂ. 1,000/- | ರೂ.1,000/- | ರೂ.180/- | ರೂ.2,180/- | --- |
| | | ಎರಡನೇ ಪಾಳಿ (4-9) | ರೂ. 1,000/- | ರೂ.1,000/- | ರೂ.180/- | ರೂ.2,180/- | |

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).